ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಮೂಡಬಿದಿರೆ

ಸಿಸಿ ನಂ. 479/2023,

ಚಾಸಾ-2 , ಫ್ರಾಸಾ -2

| | |
|---|---|
| ಹೆಸರು | ಸುಧಾಕರ ಪೂಜಾರಿ |
| ತಂದೆಯ ಹೆಸರು | ತೋಮರ ಪೂಜಾರಿ |
| ವಯಸ್ಸು | 73 ವರ್ಷ |
| ಕೆಲಸ | ಕೃಷಿ |
| ವಾಸ | ಪಾಲಡ್ಕ ಗ್ರಾಮ |
| ಪ್ರಮಾಣೀಕರಿಸಿದ ದಿನಾಂಕ | 05-08-2025 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ಚಾಸಾ-1 ನನ್ನ ಅಕ್ಕ . ಚಾಸಾ-3 ನನ್ನ ಹೆಂಡತಿ, ಚಾಸಾ-4 ನನ್ನ ಮಗ. ಆರೋಪಿತರುಗಳು ಗೊತ್ತು. ಸುಮಾರು 3 ವರ್ಷಗಳ ಹಿಂದೆ ಜೂನ್ ತಿಂಗಳಲ್ಲಿ ಸೋಮವಾರದ ದಿನದಂದು ಸಂಜೆ 5-00 ಗಂಟೆಗೆ ಗದ್ದೆಯಲ್ಲಿ ಗಲಾಟೆಯಾಗಿರುತ್ತದೆ . ಗದ್ದೆಗೆ ಟ್ರ್ಯಾಕ್ಟರ್ ನ್ನು ತೆಗೆದುಕೊಂಡು ಹೋಗಲು ಆರೋಪಿತರು ನಮಗೆ ಬಿಟ್ಟಿರುವುದಿಲ್ಲ . ಗದ್ದೆಯಲ್ಲಿ ಇರುವ ಕೃಷಿಯ ಮೇಲೆ ಟ್ರ್ಯಾಕ್ಟರನ್ನು ಕೊಂಡೊಯ್ಯುತ್ತೇವೆ ಎಂದು ಆರೋಪಿತರು ಗಲಾಟೆಯಲ್ಲಿ ಹೇಳಿರುತ್ತಾರೆ . ಆಗ ಟ್ರ್ಯಾಕ್ಟರನ್ನು ಅಲ್ಲೆ ಬಿಟ್ಟು ಆರೋಪಿತರು ಹಿಂದಕ್ಕೆ ಹೋಗಿರುತ್ತಾರೆ . ತದನಂತರ ರಾತ್ರಿ 9-00 ಗಂಟೆಗೆ ಮನೆಗೆ ಹಿಂದಿರುಗಿದ ನಂತರ 11-00 ರಿಂದ 12-00 ಗಂಟೆ ಸಮಯದಲ್ಲಿ ಪುನಃ ಆರೋಪಿತರು ಗದ್ದೆಯಲ್ಲಿ ಇದ್ದ ಕೃಷಿಯ ಮೇಲೆ ತೆಗೆದುಕೊಂಡು ಹೋಗಿರುತ್ತಾರೆ . ಇದರಿಂದ ಕೃಷಿ ಹಾಳಾಗಿರುತ್ತದೆ .

ಆರೋಪಿತರು  ನನಗೆ ಹಾಗೂ ಚಾಸಾ-1 ರವರಿಗೆ ಹೊಡೆಯುತ್ತೇನೆ , ಬಡಿಯುತ್ತೇನೆ  ಬೆದರಿಕೆ ಹಾಕಿರುತ್ತಾರೆ . ಚಾಸಾ-1 ರವರಿಗೆ 1ನೇ ಆರೋಪಿಯು ತನ್ನ ಪ್ಯಾಂಟನ್ನು ಬಿಚ್ಚಿ ತನ್ನ ಅಂಗ ಪ್ರದರ್ಶನ ಮಾಡಿರುತ್ತಾರೆ . ನಂತರ ಚಾಸಾ-1 ರವರು ಠಾಣೆಯಲ್ಲಿ ದೂರನ್ನು ದಾಖಲು ಮಾಡಿರುತ್ತಾರೆ .  ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ .

*(ಈ ಹಂತದಲ್ಲಿ ಸಾಕ್ಷಿಯನ್ನು  ಭಾಗಶಃ  ಪ್ರತಿಕೂಲ ಸಾಕ್ಷಿ ಎಂದು ವಿಚಾರಣೆ ಮಾಡಲು  ಮಾನ್ಯ ಸ ಸ ಅ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)*

ಪಾಟೀ ಸವಾಲುಃ  ಮಾನ್ಯ ಸ ಸ ಅ ರವರಿಂದಃ

ದಿಃ 03-07-2022 ರಂದು ಗಲಾಟೆಯಾಗಿರುತ್ತದೆ ಎಂದರೆ ನನಗೆ ನೆನಪಿಲ್ಲ .

ಪಾಟೀಸವಾಲುಃ  ಆರೋಪಿಗಳ ಪರ ವಕೀಲರಾದ ಶ್ರೀ ಎಸ್ .ಎಸ್.ಡಿ   ರವರಿಂದಃ

ಸಾಕ್ಷಿಗೆ ಒಂದು ಅರ್ಜಿಯನ್ನು ತೋರಿಸಲಾಗಿ , ಅರ್ಜಿಯಲ್ಲಿ ಇರುವ ಸಹಿ ತನ್ನದೆ ಎಂದು ನೋಡಿ ಗುರುತಿಸಿದ ಮೇರೆಗೆ , ಅರ್ಜಿಯನ್ನು ನಿಡಿ-1 ಎಂದು ಗುರುತಿಸಲಾಯಿತು . ತೋಮರ ಪೂಜಾರಿ ಎಂದರೆ ನನ್ನ ತಂದೆ . ನನ್ನ ತಂದೆಗೆ 7 ಜನ ಮಕ್ಕಳು . ನನ್ನ ತಂದೆಯ ಕೊನೆಯ ಮಗ ನಾನು .  ನನ್ನ ತಂದೆ ತೀರಿದ ನಂತರ ಚಾಸಾ-1 ರವರ ಹೆಸರಿಗೆ ನನ್ನ ತಂದೆಯ ಎಲ್ಲಾ ಆಸ್ತಿಗಳು, ನನ್ನ ತಂದೆಯ ಎಲ್ಲಾ ವಾರಸುದಾರರ ಪರವಾಗಿ ಆಸ್ತಿಗಳು ಚಾಸಾ-1 ರವರ ಹೆಸರಿಗೆ ಆಗಬೇಕೆಂದು ಅರ್ಜಿಯನ್ನು ಸಲ್ಲಿಸಿರುತ್ತೇನೆ .  ನನ್ನ ಮಗ ಮೇಲೆ ಆರೋಪಿತರು ಹಲವಾರು ದೂರಗಳನ್ನು ನೀಡಿರುತ್ತಾರೆ . ನನ್ನ ಮಗ 1ನೇ ಆರೋಪಿಯ ಮೇಲೆ ಯಾವುದೇ ದೂರನ್ನು ನೀಡಿರುವುದಿಲ್ಲ . ಘಟನೆ ನಡೆದ ದಿನವೇ ಪೊಲೀಸರು ಸುಮಾರು 5-00 ಗಂಟೆ ಸಮಯಕ್ಕೆ  ಮತ್ತು ಸುಮಾರು 9-00 ಗಂಟೆ ಸಮಯಕ್ಕೆ ಎರಡು ಸಲ ಸ್ಥಳಕ್ಕೆ ಬಂದಿರುತ್ತಾರೆ.

ಪೊಲೀಸರು ಎರಡೂ ಬಾರಿ ಸ್ಥಳಕ್ಕೆ ಬಂದಾಗ , ಅಲ್ಲಿ ಸುಮಾರು 50 ಜನರು ಸೇರಿದ್ದರು . ಪೊಲೀಸರು ನನ್ನನ್ನು ಹಾಗೂ ಆರೋಪಿತರನ್ನು ಸಮಾಧಾನ ಮಾಡುತ್ತಿದ್ದರು . ಅದೇ ದಿನ ನನ್ನ ಚಾಸಾ-4 ರವರು ದೂರನ್ನು ದಾಖಲು ಮಾಡಿದ್ದಾರೆ . ಒಮ್ಮೆ 5-00 ಗಂಟೆಗೆ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ , ನನ್ನ ಮಗ ದೂರು ದಾಖಲು ಮಾಡಿದ ನಂತರ 9-00 ಗಂಟೆಗೆ ಪುನಃ ಪೊಲೀಸರು ಬಂದಿರುತ್ತಾರೆ . ಆ ದಿನ 50 ಜನ ಗಲಾಟೆ ನೋಡಲು ಬಂದಿದ್ದರು . ಗಲಾಟೆ ಮಾಡುತ್ತಿದ್ದದ್ದು 4 ಜನ . ಇದೇ ವಿಚಾರವನ್ನು ನಾನು ಪೊಲೀಸರ ಮುಂದೆ ಹೇಳಿದ್ದೇನೆ . ಚಾಸಾ-4 ರವರು ತಯಾರು ಮಾಡಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಹೇಳಿದಂತಹ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ